ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಮುಸ್ತಾಖ್ ಅಹಮದ್ | ಪಿ.ಡಬ್ಲ್ಯೂ. | 1 |
| ತಂದೆಯ ಹೆಸರು | ಃ | ದಸ್ತಗೀರ್ ಸಾಬ್ | ಸಿ.ಡಬ್ಲ್ಯೂ. | 1 |
| ವಯಸ್ಸು | ಃ | 51 ವರ್ಷ | | |
| ಉದ್ಯೋಗ | ಃ | ಪಿ.ಐ., ಲೋಕಾಯುಕ್ತ ಪೋಲೀಸ, ಹಾವೇರಿ. | | |
| ವಾಸ ಸ್ಥಳ | ಃ | ಹಾವೇರಿ. | | |

ದಿ.02.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. ದಿ.30.09.2019 ರಿಂದ ದಿ.27.11.2020 ರ ವರೆಗೆ ಪಿ.ಐ. ಆಗಿ ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.26.12.2019 ರಂದು ಬೆಳಿಗ್ಗೆ 10.00 ನಾನು ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಇರುವಾಗ ನನಗೆ ಬಾತ್ಮೀದಾರರಿಂದ ದಾವಣಗೆರೆ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹಿಂಭಾಗದ ಗಣೇಶ್ ಲೇ ಔಟ್ ನ 2 ನೇ ಕ್ರಾಸಿನ ರಸ್ತೆಯಲ್ಲಿ 2-3 ಜನ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ನಾನು ಈ ಬಗ್ಗೆ ದಾಳಿ ಮಾಡಿ, ಕಾನೂನು ರೀತ್ಯ ಕ್ರಮ ಜರುಗಿಸಲು ಅನುಮತಿ ನೀಡುವಂತೆ ಮಾನ್ಯ ಪೋಲೀಸ್ ಅಧೀಕ್ಷಕರು ದಾವಣಗೆರೆ ಇವರಿಗೆ ಪತ್ರ ಬರೆದು ಅನುಮತಿ ಪಡೆದುಕೊಂಡೆನು. ಎಸ್.ಪಿ. ರವರಿಗೆ ಬರೆದ ಪತ್ರವನ್ನು **ನಿಪಿ-1** ಎಂದು, ಎಸ್.ಪಿ. ರವರ ಜ್ಞಾಪನಾ ಪತ್ರವನ್ನು **ನಿಪಿ-2** ಎಂದು ಗುರುತಿಸಲಾಯಿತು.

3. ನಂತರ ಈ ಬಗ್ಗೆ ದೂರು ತಯಾರಿಸಿ, ಪ್ರಕರಣವನ್ನು ದಾಖಲಿಸುವಂತೆ ಠಾಣಾಧಿಕಾರಿ ಕೆ.ಟಿ.ಜೆ. ನಗರ ಇವರಿಗೆ ದೂರು ನೀಡಿದ್ದು, ಠಾಣಾಧಿಕಾರಿ ಕೆ.ಟಿ.ಜೆ. ನಗರ ಇವರು ತಮ್ಮ ಠಾಣಾ ಗುನ್ನೆ ನಂ.216/2019 ರಲ್ಲಿ ಪ್ರಕರಣ ದಾಖಲಿಸಿಕೊಂಡರು. ದೂರನ್ನು **ನಿಪಿ-3** ಎಂದು ಗುರುತಿಸಲಾಯಿತು.

ಅಧೀಕ್ಷಕರು, ಚಿಗಟೇರಿ ಜಿಲ್ಲಾ ಆಸ್ಪತ್ರೆ ದಾವಣಗೆರೆ ಇವರಿಗೆ ಇಬ್ಬರು ಪಂಚರು ಮತ್ತು ಒಬ್ಬರು ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸುವಂತೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು **ನಿಪಿ-4** ಎಂದು ಗುರುತಿಸಲಾಯಿತು.

4. ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕರು ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರನ್ನಾಗಿ ಹಾಗೂ ಚಾಸಾ-4 ರವರನ್ನು ಪತ್ರಾಂಕಿತ ಅಧಿಕಾರಿಯಾಗಿ ಜ್ಞಾಪನಾ ಪತ್ರದೊಂದಿಗೆ ಕಳುಹಿಸಿಕೊಟ್ಟರು. ಸದರಿ ಜ್ಞಾಪಾನ ಪತ್ರವನ್ನು **ನಿಪಿ-5** ಎಂದು ಗುರುತಿಸಲಾಯಿತು.

5. ಚಾಸಾ-2 ರಿಂದ ಚಾಸಾ-4 ರವರು ಸಿ.ಇ.ಎನ್. ಪೋಲೀಸ್ ಠಾಣೆಗೆ ಅದೇ ದಿನ ಅಂದರೆ ದಿ.26.12.2019 ರಂದು ಮಧ್ಯಾಹ್ನ 12.00 ಗಂಟೆಗೆ ಬಂದರು. ಚಾಸಾ-2 ರಿಂದ ಚಾಸಾ-4 ರವರಿಗೆ ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ-9 ರಿಂದ ಚಾಸಾ-16 ರವರುಗಳಿಗೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ವಿಷಯನ್ನು ತಿಳಿಸಿ, ಈ ಬಗ್ಗೆ ದಾಳಿ ಮಾಡಬೇಕಾಗಿದ್ದು, ಸ್ಥಳದಲ್ಲಿ ಹಾಜರಿದ್ದು , ದಾಳಿಗೆ ಸಹಕರಿಸುವಂತೆ ತಿಳಿಸಿ, ಚಾಸಾ-2 ಮತ್ತು ಚಾಸಾ-3 ರವರಿಗೆ ನೋಟೀಸು ಜಾರಿ ಮಾಡಿರುತ್ತೇನೆ. ಚಾಸಾ.2 ರಿಂ ದ ಚಾಸಾ.4 ರವರು ದಾಳಿಗೆ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ಸದರಿ ನೋಟೀಸನ್ನು **ನಿಪಿ-6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು.

6. ಚಾಸಾ-2 ರವರು ಈಗ ಮೃತಪಟ್ಟಿದ್ದಾರೆಂದು, ಚಾಸಾ-3 ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, **ನಿಪಿ-6(ಬಿ)** ಎಂದು ಗುರುತಿಸಲಾಯಿತು.

7. ನಂತರ ದಾಳಿಗೆ ಹೋಗಲು ಅವಶ್ಯವಿರುವ ಉಪಕರಣಗಳಾದ ಲ್ಯಾಪ್ ಟಾಪ್, ಪ್ರಿಂಟರ್, ವಿದ್ಯುತ್ ಚಾಲಿತ ತೂಕದ ಯಂತ್ರ, ಒಂದು ಹ್ಯಾಂಡಿ ಕ್ಯಾಮೆರಾ ಹಾಗೂ ತನಿಖಾಧಿಕಾರಿ ಕಿಟ್ ನ್ನು ತೆಗೆದುಕೊಂಡು ನಮ್ಮ ಠಾಣೆಯ ಸರಕಾರಿ ವಾಹನದಲ್ಲಿ ಚಾಸಾ-2 ರಿಂದ ಚಾಸಾ-4, ಚಾಸಾ-14 ರಿಂದ ಚಾಸಾ-16 ರವರುಗಳೊಂದಿಗೆ ಹಾಗೂ ಬೈಕುಗಳಲ್ಲಿ ಬೇರೆ ಸಿಬ್ಬಂದಿಗಳಾದ ಚಾಸಾ-9 ರಿಂದ ಚಾಸಾ-ಚಾಸಾ- 13 ಮಾಹಿತಿ ಬಂದ ಸ್ಥಳಕ್ಕೆ ಹೋಗಲು 12.15 ಗಂಟೆಗೆ ಠಾಣೆಯನ್ನು ಬಿಟ್ಟೆವು, ಸ್ಥಳ ತಲುಪಿದಾಗ

12.30 ಗಂಟೆ ಆಗಿತ್ತು.

8. ಮಾಹಿತಿ ಬಂದ ಸ್ಥಳದಿಂದ ಸುಮಾರು 200 ಅಡಿ ದೂರದಲ್ಲಿ ಇಲಾಖಾ ವಾಹನವನ್ನು ಮರೆಯಲ್ಲಿ ನಿಲ್ಲಿಸಿ, ವಾಹನದಿಂದ ಕೆಳಕ್ಕೆ ಇಳಿದು, ನಾನು, ಪಂಚರು ಮತ್ತು ಸಿಬ್ಬಂದಿಗಳೆಲ್ಲರೂ ಪರಸ್ಪರ ಅಂಗಶೋಧನೆ ಮಾಡಿಕೊಂಡು, ನಮ್ಮಗಳ ಬಳಿ ಗಾಂಜಾ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು, ಜಾಲಿ ಗಿಡಗಳ ಮರೆಯಿಂದ ಗಣೇಶ್ ಲೇ ಔಟ್ ನ 2 ನೇ ಕ್ರಾಸಿನ ಕಡೆ ನೋಡಲಾಗಿ, ಅಲ್ಲಿ ಮೂರು ಜನ ನಿಂತಿದ್ದರು. ಆ ಪೈಕಿ ಇಬ್ಬರ ಕೈಯಲ್ಲಿ ಒಂ ದು ಕೆಂಪು ಬಣ್ಣ ಕೈ ಚೀಲ ಮತ್ತು ಹಳದಿ ಮತ್ತು ಕೆಂಪು ಬಣ್ಣದ ಕೈ ಚೀಲಗಳನ್ನು ಹಿಡಿದುಕೊಂಡು ನಿಂತಿದ್ದು, ಗಿರಾಕಿಗಳಿಗಾಗಿ ಕಾಯುತ್ತಿರುವುದು ಕಂಡು ಬಂತು.

9. ಅವರು ಗಾಂಜಾ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಚಾಸಾ-13 ರವರಿಗೆ ರೂ.100 ರ ಮುಖ ಬೆಲೆಯ ಐದು ನೋಟುಗಳನ್ನು ನೀಡಿ, ಅಲ್ಲಿ ನಿಂತ ವ್ಯಕ್ತಿಗಳಿಂದ ಗಾಂಜಾ ಖರೀದಿ ಮಾಡಿಕೊಂಡು ಬರುವಂತೆ ತಿಳಿಸಿ, ಕಳುಹಿಸಿದೆವು. ಚಾಸಾ-13 ರವರು ಆ ವ್ಯಕ್ತಿಗಳಿಂದ ಗಾಂಜಾ ಖರೀದಿ ಮಾಡಿಕೊಂಡು ಗಾಂಜಾ ಇರುವ ಎರಡು ಸಣ್ಣ ಪಾಲಿಥಿನ್ ಕವರುಗಳನ್ನು ತೆಗೆದುಕೊಂಡು ಬಂದರು. ಅವುಗಳನ್ನು ತಲಾ 200 ರೂಪಾಯಿಗಳಂತೆ ಖರೀದಿ ಮಾಡಿರುವುದಾಗಿ ಹೇಳಿ, 100 ರೂಪಾಯಿ ವಾಪಸು ನೀಡಿದರು.

10. ಸದರಿ ಎರಡು ಪಾಲಿಥಿನ್ ಕವರುಗಳಲ್ಲಿರುವ ವಸ್ತುವನ್ನು ಪರಿಶೀಲಿಸಿದಾಗ, ಅದರಲ್ಲಿ ಅರೆಬರೆ ಒಣಗಿದ ಹೂ, ಮೊಗ್ಗು, ಬೀಜ ಇರುವ ಸೊಪ್ಪು ಇದ್ದು, ಅದರಿಂದ ಘಾಟು ವಾಸನೆ ಬರುತ್ತಿತ್ತು. ಇದರಿಂದಾಗಿ ಇದು ಗಾಂಜಾ ಎಂದು ಖಚಿತವಾಯಿತು. ನಂತರ ಸದರಿ ವ್ಯಕ್ತಿಗಳನ್ನು ಹಿಡಿದುಕೊಳ್ಳಲು ಸಿಬ್ಬಂದಿ ಮತ್ತು ನಾವುಗಳು ಸೇರಿ ಸದರಿ ವ್ಯಕ್ತಿಗಳನ್ನು ಸುತ್ತುವರಿದು ಹಿಡಿದುಕೊಳ್ಳಲು ಹೋದೆವು. ಸದರಿ ವ್ಯಕ್ತಿಗಳು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ಸುತ್ತುವರಿದು ಹಿಡಿದುಕೊಂಡೆವು.

11. ನಂತರ ಅವರ ಹೆಸರು ಮತ್ತು ವಿಳಾಸವನ್ನು ಪಂಚರ ಸಮಕ್ಷಮ ಕೇಳಲಾಗಿ, ಅವರಲ್ಲಿ ಒಬ್ಬ ರೇವಣಸಿದ್ದಪ್ಪ ತಂದೆ ಬಸಪ್ಪ (ಆರೋಪಿ-1), ಇನ್ನೊಬ್ಬ ವ್ಯಕ್ತಿ ಸತೀಶ್ ಬಾಬುರಾವ್ ಜಂಬಾಳೆ

(ಆರೋಪಿ-2), ಇನ್ನೊಬ್ಬ ಲೋಕೇಶ್ ತಂದೆ ಬಸಪ್ಪ (ಆರೋಪಿ-3) ಎಂದು ತಿಳಿಸಿದರು. ಅವರನ್ನು ನಾನು ಪಂಚರ ಸಮಕ್ಷಮ ವಿಚಾರಿಸಿದಾಗ ಅವರು ತಾವು ಕೂಲಿ ಕೆಲಸ ಮಾಡುತ್ತಿದ್ದು, ಅದರಿಂದ ಐಶಾರಾಮಿ ಜೀವನ ಮಾಡಲು ಸಾಧ್ಯವಾಗುತ್ತಿಲ್ಲ, ಹೆಚ್ಚಿನ ಹಣವನ್ನು ಮೂರು ಜನ ಸೇರಿ ಗಾಂಜಾ ಮಾರಾಟ ಮಾಡಿ ಗಳಿಸೋಣ ಎಂದು ಚರ್ಚಿಸಿ, ಮೂರು ಜನ ಹಾವೇರಿ ಜಿಲ್ಲೆಯ ಸಂತ ಶಿಶುನಾಳ ಗ್ರಾಮದ ಪಕ್ಕೀರ್ ಒಬ್ಬರಿಂದ ಗಾಂಜಾ ಖರೀದಿಸಿ ಬಂದು, ದಾವಣಗೆರೆಯಲ್ಲಿ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದರು.

12. ನಂತರ ನಮ್ಮ ಸಿಬ್ಬಂದಿ ಚಾಸಾ-13 ರವರು ಮೂರು ಜನರ ಪೈಕಿ 1 ನೇ ಆರೋಪಿತನನ್ನು ತೋರಿಸಿ, ತಾನು ಇವರಿಂದ ಗಾಂಜಾ ಇರುವ ಪಾಲಿಥಿನ್ ಕವರುಗಳನ್ನು ಖರೀದಿ ಮಾಡಿರುವುದಾಗಿ ತಿಳಿಸಿದರು. ಆರೋಪಿ-1 ರ ಕೈಯಲ್ಲಿದ್ದ ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಹಳದಿ ಮತ್ತು ಕೆಂಪು ಬಣ್ಣದ ಬಟ್ಟೆ ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ, ಅದರಲ್ಲಿ ಗಾಂಜಾ ಇದೆ ಎಂದು ತಿಳಿಸಿದ್ದು, ಅದನ್ನು ಪಂಚರ ಸಮಕ್ಷಮ ಮತ್ತು ಇತರೆ ಸಿಬ್ಬಂದಿಗಳ ಸಮಕ್ಷಮ ಪಡೆದು ಪರಿಶೀಲಿಸಿದಾಗ, 32 ಬಿಳಿ ಬಣ್ಣ ಪಾಲಿಥಿನ್ ಕವರುಗಳಿದ್ದು, ಅವುಗಳಿಂದ ಗಾಂಜಾದ ಘಾಟು ವಾಸನೆ ಬರುತ್ತಿದ್ದು, ಅದರಲ್ಲಿ ಅರೆಬರೆ ಒಣಗಿದ ಹೂ, ಮೊಗ್ಗು, ಬೀಜ ಮತ್ತು ಸೊಪ್ಪು ಇದ್ದು, ಇದರ ವಾಸನೆಯಿಂದ ಇದು ಗಾಂಜಾ ಎಂದು ತಿಳಿದು ಬಂತು.

13. ನಂತರ ಚಾಸಾ-13 ರವರು 1 ನೇ ಆರೋಪಿಯಿಂದ ಖರೀದಿ ಮಾಡಿರುವ ಗಾಂಜಾ ಇರುವ ಎರಡು ಪಾಲಿಥಿನ್ ಕವರುಗಳನ್ನು 1 ನೇ ಆರೋಪಿತ ಕೈ ಚೀಲದಲ್ಲಿ ಇದ್ದಂತಹ ಪಾಲಿಥಿನ್ ಕವರುಗಳೊಂದಿಗೆ ಹೋಲಿಸಿ ನೋಡಿದಾಗ, ಅವು ಒಂದಕ್ಕೊಂದು ತಾಳೆಯಾದೆವು.

14. 2 ನೇ ಆರೋಪಿತನ ಕೈಯಲ್ಲಿ ಕೆಂಪು ಬಣ್ಣದ ಬಟ್ಟೆ ಚೀಲವಿದ್ದು, ಅದರಲ್ಲಿ ಏನು ಇದೆ ಎಂದು ಕೇಳಿದಾಗ, ಅವರು ಗಾಂಜಾ ಇರುವುದಾಗಿ ತಿಳಿಸಿದಾಗ, ಅದನ್ನು ಪಡೆದು ಪಂಚರ ಸಮಕ್ಷಮ

ಪರಿಶೀಲಸಲಾಗಿ,ಕೆಂಪು ಚೀಲದ ಒಳಗೆ ಒಂದು ಕಪ್ಪು ಬಣ್ಣ ಪ್ಲಾಸ್ಟಿಕ್ ಕವರಿದ್ದು, ಅದರಿಂದ ಘಾಟು ವಾಸನೆ ಬರುತ್ತಿದ್ದು, ಅದರಲ್ಲಿ ಅರೆಬರೆ ಒಣಗಿದ ಹೂ, ಮೊಗ್ಗು, ಬೀಜ ಮತ್ತು ಸೊಪ್ಪು ಇದ್ದು, ಅದರ ವಾಸನೆಯಿಂದ ಅದು ಗಾಂಜಾ ಸೊಪ್ಪು ಎಂದು ತಿಳಿದು ಬಂತು.

15. ಚಾಸಾ-16 ರವರ ಮೂಲಕ ತೂಕದ ಯಂತ್ರದಿಂದ, ಆರೋಪಿ-1 ರವರ ಬಳಿ ಇದ್ದಂತಹ 32 ಪ್ಲಾಸ್ಟಿಕ್ ಕವರುಗಳಲ್ಲಿ ಇರುವ ಗಾಂಜಾವನ್ನು ತೂಕ ಮಾಡಲಾಗಿ, ಅದು ಒಟ್ಟು 218 ಗ್ರಾಂ ಗಾಂಜಾ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಅರಗಿನಿಂದ ಡಿಸಿಬಿ ಎಂದು ಸೀಲ್ ಮಾಡಲಾಯಿತು. ನಂತರ 2 ನೇ ಆರೋಪಿಯ ಬಳಿ ಕಪ್ಪು ಬಣ್ಣ ಪ್ಲಾಸ್ಟಿಕ್ ಕವರಿನಲ್ಲಿ ಇದ್ದ ಗಾಂಜಾವನ್ನು ತೂಕ ಮಾಡಲಾಗಿ, ಅದು ಒಟ್ಟು 780 ಗ್ರಾಂ ಇದ್ದು, ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಅರಗಿನಿಂದ ಡಿಸಿಬಿ ಎಂದು ಸೀಲ್ ಮಾಡಲಾಯಿತು.

16. ನಂತರ ಸಿಬ್ಬಂದಿಯಾದ ಚಾಸಾ-13 ರವರು ಆರೋಪಿ-1 ರಿಂದ ಖರೀದಿ ಮಾಡಿ ತಂದಿರುವ ಗಾಂಜಾ ಇರುವ ಎರಡು ಪ್ಲಾಸ್ಟಿಕ್ ಕವರುಗಳನ್ನು ತೂಕ ಮಾಡಲಾಗಿ, ಅದರಲ್ಲಿ 12 ಗ್ರಾಂ ಗಾಂಜಾ ಇದ್ದು, ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಅರಗಿನಿಂದ ಡಿಸಿಬಿ ಎಂದು ಸೀಲ್ ಮಾಡಲಾಯಿತು.

17. ನಂತರ ಮೂರು ಜನ ಆರೋಪಿತರಿಗೆ ಅವರ ಬಳಿ ಗಾಂಜಾ, ಗಾಂಜಾ ಮಾರಾಟ ಮಾಡಿದ ಹಣ ಇರುವ ಬಗ್ಗೆ ಅಂಗಶೋಧನೆ ಮಾಡಬೇಕಾಗಿದ್ದು, ಅಂಗಶೋಧನೆಯನ್ನು ಪತ್ರಾಂಕಿತ ಅಧಿಕಾರಿ ಮಾಡಬೇಕೋ ? ಅಥವಾ ನಾನು ಮಾಡಬೇಕೋ ಎಂಬ ಬಗ್ಗೆ ಆರೋಪಿತರಿಗೆ ನೋಟೀಸು ನೀಡಿದ್ದು, ಅವರು ಪತ್ರಾಂಕಿತ ಅಧಿಕಾರಿಯವರು ಅಂಗಶೋಧನೆ ಮಾಡಲು ಒಪ್ಪಿಕೊಂಡರು. ಆರೋಪಿತರಿಗೆ ಕೊಟ್ಟ ನೋಟೀಸುಗಳನ್ನು ಕ್ರಮವಾಗಿ **ನಿಪಿ-7** ರಿಂದು **ನಿಪಿ-9** ಎಂದು, ತನಿಖಾಧಿಕಾರಿಯ ಸಹಿಯನ್ನು ನಿಪಿ-7(ಎ) ರಿಂದ ನಿಪಿ-9(ಎ) ಎಂದು ಮತ್ತು ಆರೋಪಿತರ ಸಹಿಗಳನ್ನು ನಿಪಿ-7(ಬಿ) ರಿಂದ ನಿಪಿ-9(ಬಿ) ಎಂದು ಕ್ರಮವಾಗಿ ಗುರುತಿಸಲಾಯಿತು.

18. ನಂತರ ಚಾಸಾ-4 ರವರು 1 ನೇ ಆರೋಪಿತನನ್ನು ಅಂಗಶೋಧನೆ ಮಾಡಿದಾಗ, 1 ನೇ

ಆರೋಪಿಯ ಅಂಗಿಯ ಎದೆ ಜೇಬಿನಲ್ಲಿ 100 ರೂಪಾಯಿ ಮುಖ ಬೆಲೆಯ 10 ನೋಟುಗಳು ದೊರೆತವು. ಇವುಗಳ ಬಗ್ಗೆ ಕೇಳಲಾಗಿ, ಈ ಹಣ ಗಾಂಜಾ ಮಾರಾಟದಿಂದ ಬಂದ ಹಣ ಎಂದು ತಿಳಿಸಿರುತ್ತಾರೆ. ಅದನ್ನು ಮುಂದಿನ ಕ್ರಮಕ್ಕೆ ವಶಪಡಿಸಿಕೊಳ್ಳಲಾಯಿತು.

19. ನಂತರ ಚಾಸಾ-4 ರವರು 2 ಮತ್ತು 3 ಆರೋಪಿತರನ್ನು ಅಂಗಶೋಧನೆ ಮಾಡಿದಾಗ ಯಾವುದೇ ಗಾಂಜಾ ಮತ್ತು ಹಣ ಸಿಗಲಿಲ್ಲ. ನಂತರ 1 ನೇ ಆರೋಪಿಯು ಬಳಸಿದ್ದ ಮಾರುತಿ ಟೆಕ್ಸಟೈಲ್ ಎಂದು ಹೆಸರು ಇರುವ ಹಳದಿ ಮತ್ತ ಕೆಂಪು ಬಣ್ಣದ ಕೈ ಚೀಲವನ್ನುಹಾಗೂ 2 ನೇ ಆರೋಪಿಯು ಬಳಸಿದ್ದ ಕೆಂಪು ಬಣ್ಣದ ಕೈ ಚೀಲವನ್ನು ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದುಕೊಂಡೆವು.

20. ಮೇಲೆ ಹೇಳಿದ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಮಧ್ಯಾಹ್ನ 12.40 ರಿಂದ 2.30 ರವರೆಗೆ ಪಂಚನಾಮೆಯನ್ನು ಚಾಸಾ-15 ರವರ ಮೂಲಕ ಟೈಪ್ ಮಾಡಿಸಿ, ಪ್ರಿಂಟ್ ತೆಗೆಯಲಾಯಿತು. ಈ ಪಂಚನಾಮೆ ಪ್ರಕ್ರಿಯೆಗಳ ಬಗ್ಗೆ ಚಾಸಾ-16 ರವರು ಹ್ಯಾಂಡಿ ಕ್ಯಾಮೆರಾದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಮಹಜರನ್ನು **ನಿಪಿ-10** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು, ನಮ್ಮ ಸಿಬ್ಬಂದಿಗಳು, ಪಂಚರು, ಪತ್ರಾಂಕಿತ ಅಧಿಕಾರಿ ಮತ್ತು ಆರೋಪಿತರು ಸಹಿ ಮಾಡಿರುತ್ತಾರೆ. ಸಾಕ್ಷಿಯ ಸಹಿಯನ್ನು **ನಿಪಿ-10(ಎ)**, ಮೂವರು ಆರೋಪಿತರ ಸಹಿಗಳನ್ನು ಕ್ರಮವಾಗಿ **ನಿಪಿ-10(ಬಿ) ರಿಂದ ನಿಪಿ-10(ಡಿ)** ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ತೆಗೆಯಲಾದ 11 ಪೋಟೋಗಳನ್ನು **ನಿಪಿ-11** ರಿಂದ **ನಿಪಿ-21** ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ಆರೋಪಿತರು, ಪಂಚರು, ಪತ್ರಾಂಕಿತ ಅಧಿಕಾರಿ ಮತ್ತು ಸಿಬ್ಬಂದಿ ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

21. ಆರೋಪಿತರು ಮತ್ತು ಜಪ್ತಿ ಮಾಡಿಕೊಂಡ ಮಾಲುಗಳೊಂದಿಗೆ ಕೆ.ಟಿ.ಜಿ.ನಗರ ಪೋಲೀಸ್ ಠಾಣೆಗೆ ಬಂದು ಠಾಣಾಧಿಕಾರಿಯ ಮುಂದೆ ಮುಂದಿನ ಕ್ರಮಕ್ಕಾಗಿ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಸದರಿ ವರದಿಯನ್ನು **ನಿಪಿ-22** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

**ನಿಪಿ-22(ಎ)** ಎಂದು ಗುರುತಿಸಲಾಯಿತು.

22. ಅಮಾನತ್ತುಪಡಿಸಿಕೊಳ್ಳಲಾದ 12 ಗ್ರಾಂ ಗಾಂಜಾ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ, ಸೀಲ್ ಮಾಡಲಾದ ಪ್ಯಾಕನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಸದರಿ ಪ್ಯಾಕ್ ಇಲಿ ಕಚ್ಚಿ ಹರಿದು ಹೋಗಿದ್ದು, ಅದನ್ನು **ಎಂ.ಓ.1** ಎಂದು, 1 ನೇ ಆರೋಪಿಯ ಅಂಗಶೋಧನೆಯಲ್ಲಿ ದೊರೆತ 1000 ರೂಪಾಯಿ ನಗದು ಹಣವನ್ನು (ಟ್ರಜರಿ ಬಾಕ್ಸನಲ್ಲಿ ಇಟ್ಟಿದ್ದು, ಅದನ್ನು ಈ ದಿನ ನ್ಯಾಯಾಲಯಕ್ಕೆ ತರಿಸಿದ್ದು) **ಎಂ.ಓ.2** (100 ಮುಖ ಬೆಲೆಯ 10 ನೋಟುಗಳು) ಎಂದು ಗುರುತಿಸಲಾಯಿತು. ಮಾರುತಿ ಟೆಕ್ಸಟೈಲ್ ಎಂದು ಬರೆದಿರುವ ಹಳದಿ ಮತ್ತು ಕೆಂಪು ಬಣ್ಣದ ಬಟ್ಟೆಯ ಕೈ ಚೀಲ ಅದನ್ನು ಸಹ ಅಲ್ಲಲ್ಲಿ ಇಲಿ ತಿಂದಿದ್ದು **ಎಂ.ಓ.3** ಎಂದು ಗುರುತಿಸಲಾಯಿತು. 2 ನೇ ಆರೋಪಿಯ ಬಳಿ ಇದ್ದ ಕೆಂಪು ಬಣ್ಣದ ಬಟ್ಟೆಯ ಕೈ ಚೀಲವನ್ನು **ಎಂ.ಓ.4** ಎಂದು ಗುರುತಿಸಲಾಯಿತು. (ಮೇಲ್ಕಂಡ ಎಂ.ಓ.1 ರಿಂದ ಎಂ.ಓ.4 ವಸ್ತುಗಳು ಪಿ.ಎಫ್. ಸಂಖ್ಯೆ 111/2019 ರ ಕ್ರಮ ಸಂಖ್ಯೆ 3 ರಿಂದ 6 ರಲ್ಲಿ ನಮೂದು ಆಗಿರುತ್ತವೆ.)

**<u>ಪಾಟೀ ಸವಾಲು :</u>**

ಆರೋಪಿತರ ಪರ ವಕೀಲರು ನಿಶಾನೆಯಾಗಿ ಗುರುತಿಸಿರುವ ದಾಖಲೆಗಳನ್ನು ಹೊಂದಿಸಿಕೊಳ್ಳುವ ಸಲುವಾಗಿ ಪಾಟೀ ಸವಾಲನ್ನು ಮುಂದೂಡುವಂತೆ ಕೋರಿದ್ದರ ಮೇರೆಗೆ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.15.07.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಶ್ರೀ ಕೆ.ಹೆಚ್.ವಿ, ವಕೀಲರಿಂದ ಆರೋಪಿತರ ಪರವಾಗಿ</u> :

23. ನಿಪಿ.1 ರ ಪ್ರಕಾರ ಪೋಲೀಸ್ ಅಧೀಕ್ಷಕರಿಗೆ ಎಷ್ಟು ಗಂಟೆಗೆ ಪತ್ರ ಬರೆದಿದ್ದೇನೆಂದು, ನಿಪಿ.1 ರಲ್ಲಿ ಸಮಯ ನಮೂದು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಸ್ವತಃ ನುಡಿದಿದ್ದಾರೆ, ಬೆಳಿಗ್ಗೆ 10 ಗಂಟೆಗೆ ಮಾಹಿತಿ ಬಂದಿದ್ದು, ಮಾಹಿತಿ ಬಂದ ಕೂಡಲೇ ಪತ್ರ ಬರೆದಿದ್ದೇನೆಂದು ಹೇಳುತ್ತಾರೆ. ಪೋಲೀಸರ ಅಧೀಕ್ಷಕರಿಂದ ಅನುಮತಿ ಪತ್ರ ನನಗೆ ಎಷ್ಟು ಗಂಟೆಗೆ ತಲುಪಿತ್ತು ಎಂದು ನಮೂದು ಮಾಡಿಲ್ಲ.

24. ವಿದ್ಯಾನಗರ ಪೋಲೀಸ್ ಠಾಣೆಯಿಂದ ದಾವಣಗೆರೆ ಪೋಲೀಸ್ ಅಧೀಕ್ಷಕರ ಕಛೇರಿ 3 ಕಿ.ಮೀ ದೂರದಲ್ಲಿದೆ. ವಿದ್ಯಾನಗರ ಪೋಲೀಸ್ ಠಾಣೆಯಿಂದ ದಾವಣಗೆರೆ ಪೋಲೀಸ್ ಅಧೀಕ್ಷಕರ ಕಛೇರಿ ಸುಮಾರು 7 ಕಿ.ಮೀ ದೂರ ಇದೆ ಎಂದರೆ ಸರಿಯಲ್ಲ. ಅನುಮತಿ ಪತ್ರವನ್ನು ಸಿಬ್ಬಂದಿ ಕೈಯಲ್ಲಿ ಪಡೆದುಕೊಂಡಿದ್ದೇನೆ. ಪೋಲೀಸ್ ಅಧೀಕ್ಷಕರಿಗೆ ಕೋರಿಕೆ ಪತ್ರವನ್ನು ಚಾಸಾ.10 ರವರ ಮೂಲಕ ಕಳುಹಿಸಿದ್ದೆ.

25. ಚಾಸಾ.2 ರಿಂದ ಚಾಸಾ.4 ರವರು ಸಿಇಎನ್ ಪೋಲೀಸ್ ಠಾಣೆಯಲ್ಲಿ ಭೇಟಿಯಾದರು. ಸಿಜಿ ಆಸ್ಪತ್ರೆಗೆ ಪಂಚರನ್ನು ಕಳುಹಿಸಿಕೊಡಿ ಎಂದು ಕೊಟ್ಟ ಕೋರಿಕೆ ಪತ್ರದಲ್ಲಿ ಸಮಯ ನಮೂದು ಮಾಡಿಲ್ಲ. ದೂರನ್ನು ನಾನೇ ಕೆಟಿಜೆ ನಗರ ಪೋಲೀಸ್ ಠಾಣೆಗೆ ಹೋಗಿ ಕೊಟ್ಟಿರುತ್ತೇನೆ. ಕೆಟಿಜೆ ನಗರ ಪೋಲೀಸ್ ಠಾಣೆಗೆ ದೂರು ನೀಡಿದಾಗ ಬೆಳಿಗ್ಗೆ 11.00 ಗಂಟೆಯಾಗಿತ್ತು. ವಿದ್ಯಾನಗರ ಪೋಲೀಸ್ ಠಾಣೆಯಿಂದ ಕೆಟಿಜೆ ನಗರ ಪೋಲೀಸ್ ಠಾಣೆಗೆ ಸುಮಾರು 1 1/2 ಯಿಂದ 2 ಕಿಮೀ ದೂರ ಇದೆ. ಕೆಟಿಜೆ ನಗರ ಪೋಲೀಸ್ ಠಾಣೆಯಿಂದ ಪುನಃ ಸಿಇಎನ್ ಪೋಲೀಸ್ ಠಾಣೆಗೆ ಬಂದು ದಾಳಿ ಕ್ರಮಕ್ಕೆ ಹೋಗಿರುತ್ತೇನೆ.

26. ಸಿಜಿ ಆಸ್ಪತ್ರೆಯಿಂದ ಪಂಚರು ನಮ್ಮ ಜೀಪಿನಲ್ಲಿಯೇ ಬಂದರು. ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂಬ ಸ್ಥಳದಿಂದ ಸುಮಾರು 200 ಅಡಿ ದೂರದಲ್ಲಿ ನಿಂತು ವಾಚ್ ಮಾಡುತ್ತಿದ್ದೇವು. ನಾವು ದೂರದಲ್ಲಿ ಸುಮಾರು 10 ನಿಮಿಷ್ಯಗಳ ಕಾಲ ನಿಂತು ವಾಚ್ ಮಾಡಿದೆವು. 10 ನಿಮಿಷ್ಯಗಳ

ಅವಧಿಯವರೆಗೆ ಸಾರ್ವಜನಿಕರು ಯಾರೂ ಆರೋಪಿತರಿಂದ ಗಾಂಜಾ ಖರೀದಿ ಮಾಡಲು ಬಂದಿರುವುದಿಲ್ಲ.

27. ನಮ್ಮ ಸಿಬ್ಬಂದಿ ಮೂಲಕ ಕಳುಹಿಸಿದ ನೋಟುಗಳ ನಂಬರ್ ಬರೆದಿಟ್ಟುಕೊಂಡಿಲ್ಲ. ಸದರಿ ನೋಟುಗಳು ಹಳೆಯ ನೂರು ರೂಪಾಯಿ ನೊಟುಗಳು. ಚಾಸಾ.13 ರವರು ಗಾಂಜಾವನ್ನು ಖರೀದಿ ಮಾಡಲು ಹೋದಾಗ ಅವರನ್ನು ನೋಡಿ ಆರೋಪಿತರು ಓಡಿ ಹೋಗಲು ಪ್ರಯತ್ನಪಟ್ಟಿಲ್ಲ.

28. ಮೂರು ಜನ ಆರೋಪಿತರ ಪೈಕಿ ಇಬ್ಬರ ಕೈಯಲ್ಲಿ ಒಂದೊಂದು ಬ್ಯಾಗಗಳು ಇತ್ತು. 1 ನೇ ಆರೋಪಿ ರೇವಣಸಿದ್ದಪ್ಪ ಇತನ ಬಳಿ ಹಳದಿ ಮತ್ತು ಕೆಂಪು ಬಣ್ಣದ ಕೈ ಚೀಲ ಇತ್ತು. ಎರಡನೇ ಆರೋಪಿ ಸತೀಶ್ ರವರ ಬಳಿ ಕೆಂಪು ಬಣ್ಣದ ಕೈ ಚೀಲ ಇತ್ತು.

29. ಮೂರು ಜನ ಆರೋಪಿತರು ಸಾರ್ವಜನಿಕರನ್ನು ಗಾಂಜಾ ಇದೆ ಬನ್ನಿ ಎಂದು ಕೂಗಿ ಕರೆಯುತ್ತಿರಲಿಲ್ಲ. ನಾವು ವಾಚ್ ಮಾಡುತ್ತಿದ್ದ ಸ್ಥಳದಿಂದ ಅಶೋಕ ಹೊಟೇಲ್ ಸುಮಾರು 100 ಅಡಿ ದೂರದಲ್ಲಿ ಇತ್ತು. ಅಶೋಕ ಹೊಟೇಲ್ ರಸ್ತೆ ವಾಹನಗಳು ಓಡಾಡುವ ಸ್ಥಳ ಎಂದರೆ ಸರಿ. ಜನ ಸಂದಣಿ ಬಹಳ ಇರುತ್ತದೆ ಎಂದರೆ ಸರಿಯಲ್ಲ.

30. ನಾವು ವಾಚ್ ಮಾಡುತ್ತಿದ್ದ ಸ್ಥಳದಿಂದ ಆರೋಪಿತರು ನಿಂತಿದ್ದ ಸ್ಥಳ ಸ್ಪಷ್ಟವಾಗಿ ಕಾಣಿಸುತ್ತಿತ್ತು ಎಂದರೆ ಸರಿ. ಅಲ್ಲಿಂದ ಫೊಟೋ ತೆಗೆದಿದ್ದಿರಾ ಎಂದರೆ ಸಾಕ್ಷಿಯು ನಾವು ಫೊಟೋ ತೆಗೆದಿಲ್ಲ ಎಂದು ಹೇಳುತ್ತಾರೆ. ನಮ್ಮ ಸಿಬ್ಬಂದಿಯವರನ್ನು ಗಾಂಜಾ ಖರೀದಿ ಮಾಡಲು ಆರೋಪಿತರ ಕಳುಹಿಸುವ ಪೂರ್ವದಲ್ಲಿ ಆರೋಪಿಗಳು ನಿಂತಿರುವುದನ್ನು ಫೊಟೋ ತೆಗೆದಿಲ್ಲ. ಚಾಸಾ.13 ರವರು ಆರೋಪಿತರಿಗೆ ಹಣ ಕೊಟ್ಟು ಗಾಂಜಾ ಖರೀದಿ ಮಾಡುವ ಸನ್ನಿವೇಷವನ್ನು ಫೊಟೋ ತೆಗೆದಿಲ್ಲ.

31. ನಿಪಿ.11 ರಿಂದ ನಿಪಿ.21 ರಂತೆ ತೆಗೆಸಿದ ಫೋಟೋಗಳಲ್ಲಿ ಕಂಡುಬರುವ ಜಾಗದಿಂದ 100 ಅಡಿ

ದೂರದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಇದೆ ಎಂದರೆ ಸರಿ. ಸದರಿ ಫೋಟೋಗಳಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಮತ್ತು ಅಶೋಕ ಹೊಟೇಲ್ ಕಾಣಿಸುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ್ವತಃ ನುಡಿದಿದ್ದಾರೆ ಸದರಿ ಫೋಟೋಗಳನ್ನು ಗಣೇಶ್ ಲೇಜೌಟ್ ನ ಎರಡನೇ ಕ್ರಾಸ್ ನಲ್ಲಿ ತೆಗೆದಿದ್ದರಿಂದ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಮತ್ತು ಅಶೋಕ ಹೊಟೇಲ್ ಕಾಣಿಸುವುದಿಲ್ಲ ಎಂದು ಹೇಳುತ್ತಾರೆ.

32. ಗಣೇಶ ಲೇಜೌಟ್ ನ 2 ನೇ ಕ್ರಾಸ್ ನಿಂದ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಹಿಂಭಾಗದಲ್ಲಿದೆ ಮತ್ತು ಅಶೋಕ ಹೊಟೇಲ್ 85 ಅಡಿ ದೂರದಲ್ಲಿದೆ. ಮೂರು ಜನ ಆರೋಪಿಗಳನ್ನು ಮೊದಲಿಗೆ ಯಾರು ಯಾವ ಆರೋಪಿತರನ್ನು ಹಿಡಿದುಕೊಂಡರು ಎಂದರೆ ಸಾಕ್ಷಿಯು ಎಲ್ಲಾರೂ ಸುತ್ತುವರೆದುಕೊಂಡು ಹಿಡಿದುಕೊಂಡೆವು ಎಂದು ಹೇಳುತ್ತಾರೆ.

33. ಆರೋಪಿತರಿಂದ ವಶಪಡಿಸಿಕೊಂಡ ಎಲ್ಲಾ ಗಾಂಜಾ ಪ್ಯಾಕೇಟ್ ಗಳನ್ನು ಒಂದೊಂದಾಗಿ ತೂಕ ಮಾಡಿಲ್ಲ, ಒಟ್ಟಾಗಿ ತೂಕ ಮಾಡಿರುತ್ತೇವೆ. 1 ನೇ ಆರೋಪಿಯಿಂದ ನೂರು ರೂಪಾಯಿ ಮುಖಬೆಲೆಯ ಹತ್ತು ನೋಟುಗಳು ಒಟ್ಟು ಒಂದು ಸಾವಿರ ರೂಪಾಯಿಗಳನ್ನು ವಶಪಡಿಸಿಕೊಂಡಿರುತ್ತೇವೆ. ಸದರಿ ಹತ್ತು ನೋಟುಗಳು ಹಳೆಯ ನೋಟುಗಳು. ನಾವು ಕಳುಹಿಸಿದ ನೋಟುಗಳು ಮತ್ತು ಆರೋಪಿತರಿಂದ ವಶಪಡಿಸಿಕೊಂಡ ನೋಟುಗಳನ್ನು ಪ್ರತ್ಯೇಕಿಸಿಲ್ಲ.

34. ಆರೋಪಿತರಿಂದ ವಶಪಡಿಸಿಕೊಂಡ ವಸ್ತುಗಳು ಗಾಂಜಾ ಎಂದು ಯಾರಾನ್ನಾದರೂ ಕರೆಯಿಸಿ ಪರಿಕ್ಷೆಗೆ ಒಳಪಡಿಸಿದ್ದಿರಾ ಎಂದರೆ ಸಾಕ್ಷಿಯು ನಮಗೆ ಅದರ ಘಾಟು ವಾಸನೆಯಿಂದ ಗಾಂಜಾ ಎಂದು ತಿಳಿದು ಬರುತ್ತದೆಂದು ಹೇಳುತ್ತಾರೆ. ಆರೋಪಿತರನ್ನು ಸದರಿ ಗಾಂಜಾವನ್ನು ಎಲ್ಲಿಂದ ತಂದಿರುವುದಾಗಿ ವಿಚಾರಿಸಿದ್ದೇನೆ. ಅದಕ್ಕೆ ಆರೋಪಿತರು ಸದರಿ ಗಾಂಜಾವನ್ನು ಹಾವೇರಿ ಜಿಲ್ಲೆಯ ಸಂತಶಿಶುನಾಳ ಶರೀಫ್ ಗ್ರಾಮದ ಒಬ್ಬ ಫಕೀರ್ ಎನ್ನುವವರಿಂದ ತಂದಿರುವುದಾಗಿ ತಿಳಿಸಿದರು.

35. ಸದರಿ ಗಾಂಜಾವನ್ನು ಆರೋಪಿತರು ಮಾರಾಟ ಮಾಡುವ ಎರಡು ಮೂರು ದಿನಗಳ ಮೊದಲು ಖರೀದಿ ಮಾಡಿರುವುದಾಗಿ ತಿಳಿಸಿದರು. ಎಷ್ಟು ಹಣವನ್ನು ಕೊಟ್ಟು ಗಾಂಜಾವನ್ನು ಖರೀದಿ ಮಾಡಿದ್ದೇವೆಂದು ನಮಗೆ ಆರೋಪಿತರು ಸಂಪೂರ್ಣ ಮಾಹಿತಿ ಕೊಟ್ಟಿರುವುದಿಲ್ಲ. ಆರೋಪಿತರು ಹಾವೇರಿ ಜಿಲ್ಲೆಯ ಸಂತಶಿಶುನಾಳ ಗ್ರಾಮದಿಂದ ಗಾಂಜಾವನ್ನು ಖರೀದಿ ಮಾಡಿದ್ದಾಗಿ ಹೇಳಿದ್ದರಿಂದ ಸದರಿ ಗ್ರಾಮಕ್ಕೆ ಹೋಗಿ ಏನಾದರೂ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ತಾನು ವಿಚಾರಣೆ ಮಾಡಿಲ್ಲವೆಂದು ತನ್ನ ಮುಂದಿನ ಅಧಿಕಾರಿ ಮಾಡಿದ್ದಾರೆಂದು ಹೇಳುತ್ತಾರೆ.

36. ಮುಂದಿನ ತನಿಖಾಧಿಕಾರಿಯ ಮುಂದೆ ತನಿಖಾ ಸಮಯದಲ್ಲಿ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಹೇಳಿಕೆಯನ್ನು ಕೊಟ್ಟಿಲ್ಲ. ಮೂರು ಆರೋಪಿತರಿಂದ ವಶಪಡಿಸಿಕೊಂಡ ಗಾಂಜಾದ ಒಟ್ಟು ತೂಕ 1 ಕೆ.ಜಿ ಗೂ ಹೆಚ್ಚಿತ್ತು. ನಿಖರವಾಗಿ ಎಷ್ಟು ಇತ್ತು ಎಂದು ಈಗ ಹೇಳಲಿಕ್ಕಾಗುವುದಿಲ್ಲ. ಆರೋಪಿತರ ಕೈಯಲ್ಲಿದ್ದ ಚೀಲಗಳ ಸಮೇತ ತೂಕ ಮಾಡಿಲ್ಲ. ಚೀಲದಿಂದ ತೆಗೆದು ತೂಕ ಮಾಡಿದ್ದೇವೆ. ಚೀಲಗಳನ್ನು ಎಷ್ಟು ತೂಕ ಇತ್ತು ಎಂದು ತೂಕ ಮಾಡಿ ನೋಡಿಲ್ಲ.

37. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ದಿನಾಂಕ 26.12.2019 ರಂದು ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಶಾನೆಯನ್ನಾಗಿ ಗುರುತಿಸಿರುವ ಎಲ್ಲಾ ಪೊಟೋಗಳನ್ನು ನಮ್ಮ ಠಾಣಾ ಆವರಣದಲ್ಲಿ ತೆಗೆದಂತಹ ಪೊಟೋಗಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಅಮಾನತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.